



ಚಾರ್ಲೀ ಚಾಪ್ಲಿನ್

ಇದಕ್ಕಿಂತ ಬೇರೆ ನಿದರ್ಶನ ಬೇಕೇ ಎನ್ನಿಸಿತ್ತು .

★★★

ಈ ಆಧುನಿಕ ಕಾಲದಲ್ಲೂ ಎಡಗೈ ಬಳಕೆಯ ಕುರಿತು ಇಂತಹ ಧೋರಣೆ ಇರುವಾಗ, ಸುಮಾರು ಅರ್ಧ ಶತಕದಷ್ಟು ಹಿಂದಿನ ಮಡಿ ಹುಡಿ, ಸಂಪ್ರದಾಯವೇ ಹಾಸುಹೊಕ್ಕಾದ ನೆರೆತ ತಲೆಗಳಿದ್ದ ಕೂಡುಕುಟುಂಬದ ವ್ಯವಸ್ಥೆಯಲ್ಲಿ ಹುಟ್ಟಾ ಎಡಚಳಾದ ನನ್ನ ಪರಿಸ್ಥಿತಿ ಹೇಗಿದ್ದೀತು? 'ಅದೊಂದು' ಕೆಲಸದ ಹೊರತಾಗಿ ಬೇರೆ ಕೆಲಸಗಳಿಗೆ ಎಡಗೈ ಬಳಸುವುದೇ ಮಹಾಪರಾಧ ಎನ್ನುವಂತಹ ಕಾಲವದು. ಪಂಕ್ತಿಯಲ್ಲಿ ಕುಳಿತು ಸುಮಾರು ಐದಾರು ವರ್ಷದ ನಾನು ಮೇಲಾಗಿ ಹೆಣ್ಣು ಕೂಸು ಎಡಗೈಯಲ್ಲಿ ಊಟ ಮಾಡಿದರೆ ಆಗಿನ ಕಾಲದ ಸಂಪ್ರದಾಯವಾದಿಗಳು ಹೇಗೆ ತಾನೇ ಸಹಿಸಿಯಾರು?

ದಾದ ಅಂದರೆ ಅಪ್ಪ ಜೊತೆಗಿದ್ದರೆ ಅವನ ಹೆದರಿಕೆಗೆ ಯಾರೂ ಚಕಾರವೆತ್ತುತ್ತಿರಲಿಲ್ಲ. ಅಪ್ಪ ಕೆಲಸದ ನಿಮಿತ್ತ ಬೇರೆ ಊರಿಗೆ ಹೋದಾಗ ಮಾತ್ರ ನನ್ನ ಗೋಳು ಹೇಳತೀರದು. ಬಲಗೈಯಲ್ಲೇ ಉಣ್ಣಲು, ಬರೆಯಲು ಇತರ ಕೆಲಸಗಳನ್ನು ಮಾಡಲು ಎಲ್ಲರಿಂದಲೂ ವರಾತ. ಮಾಡದಿದ್ದಲ್ಲಿ ಎಡಗೈ ಗೆಣ್ಣಿನ ಮೇಲೆ ಹೊಡೆತ, ಬಯ್ಗುಳ ನಿಶ್ಚಿತ. ಭಯದಿಂದ ಎರಡೂ ಕೈಯ್ಯಲ್ಲಿ ಬರಹ, ಇತರ ಕೆಲಸಗಳನ್ನು ಕಷ್ಟಪಟ್ಟು ರೂಢಿಸಿಕೊಂಡು ಸವ್ಯಸಾಚಿಯಾದೆನಾದರೂ ನಾ ಮಾತ್ರ ಪಕ್ಕಾ ಎಡಚಳು.

ನನ್ನನ್ನು ಶಾಲೆಗೆ ಸೇರಿಸಿದಾಗ ಎಡಚಳೆಂಬ ಕಾರಣಕ್ಕೆ ಎಲ್ಲರಿಂದಲೂ ನಗೆಪಾಟಲಿಗೆ, ಕೀಟಲೆಗೆ ಈಡಾಗಿದ್ದೆ. ನನ್ನೊಡನಾರೂ ಕುಳಿತುಕೊಳ್ಳುತ್ತಿರಲಿಲ್ಲ. ಟೀಚರ್ ಕೂಡ 'ಆ ಕೈಯ್ಯಲ್ಲಿ ಬರೀಬಾರ್ದು ಹೊಲಸು ಕೈ ಅದು, ದೇವ್ರು ಶಾಪ ಕೊಡ್ತಾರೆ..' ಎಂದರು. ನಾನೇನೋ ತಪ್ಪು ಮಾಡಿದಂತಹ ಭಾವ.

ಮನೆಗೆ ಬಂದು ಮಂಕಾಗಿ ಕುಳಿತಿದ್ದಾಗ ದಾದಾ ವಿಷಯ ತಿಳಿದು ಬೇಸರಗೊಂಡಿದ್ದ. ಆಗಿನ ಕಾಲದ ವಿಜ್ಞಾನ ಪದವೀಧರ ದಾದನಿಗೆ ನನ್ನ ಎಡಚತನದ ಸಕಾರಣದ ಅರಿವಿತ್ತು. 'ಹುಟ್ಟಾ ಎಡಚರಿಗೆ ಒತ್ತಾಯದಿಂದ ಬಲಗೈ ರೂಢಿಸಿದರೆ ಅವರಲ್ಲಿನ ಸೃಜನಶೀಲತೆ, ಕ್ರಿಯಾಶೀಲತೆಯನ್ನು ಚಿವುಟಿ ಹಾಕಿದಂತೆ'